ಅಸಲು ದಾವಾ ನಂ.229/2022
ಪಿ ಡಬ್ಲ್ಯು -1

ದಿನಾಂಕಃ 21-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ . ಎಮ್ ಎಮ್ ಪಿ ವಕೀಲರಿಂದ.</u>

ನನ್ನ ಮತ್ತು ಮೃತ ಆನಂದ ಇವರ ವಿವಾಹ ನೋಂದಣಿಯಾದ ಬಗ್ಗೆ ಉಪನೋಂದಣಾಧಿಕಾರಿಯವರಿಂದ ಪಡೆದುಕೊಂಡ ವಿವಾಹ ನೋಂದಣಿ ಅರ್ಜಿ, ವಿವಾಹ ನೋದಣಿ ಪತ್ರ ಹಾಗೂ ಅದಕ್ಕೆ ಲಗತ್ತಿಸಿದ ಅವಶ್ಯಕ ದಾಖಲೆಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಒಟ್ಟಾರೆಯಾಗಿ ನಿಪಿ-3 ಎಂದು ಗುರುತಿಸಲಾಯಿತು. ಮೃತ ನನ್ನ ಗಂಡ ಆನಂದ ಇವರ ಕುಟುಂಬ ಉತ್ತರ ಜೀವಿತರ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ ಅದನ್ನು ನಿಶಾನೆ ಅಂತಾ ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರು ವ್ಯಕ್ತಪಡಿಸಿದ್ದು ಅವರ ತಕರಾರಿಗೆ ಒಳಪಟ್ಟು ರುಜುವಾತಿನ ಭಾರದೊಂದಿಗೆ ಸದರಿ ಕಾಗದ ಪತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲು ಪ್ರಾರ್ಥಿಸುತ್ತೇನೆ.

**<u>ಪಾಟಿ ಸವಾಲುಃ-</u>** ಪ್ರತಿವಾದಿ ಪರ ಶ್ರೀ. ಐ ವಿ ಪಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).